ಹೇಳಿದರೆ ಒಳ್ಳೆಯದು. Should I transfer that Sub-Inspector ? Supposing if I transfer that Sub-Inspector immediately there will be an application before me about such transfer from some other person. ಆಗ ಇದು ಬೇರೆ ಶುರುವಾಗುತ್ತದೆ. ಇದು ಒಂದೇ ಜಾತಿಯವರ ಗುಂಪು. ದಾವಣಗೆರೆ ಸುತ್ತಮುತ್ತಲ ನೆಲವೇ ಹಾಗೆ ಕಾಣುತ್ತದೆ. So I have nothing to do with that. Therefore, let the hon. Members come to a definite conclusion about this matter. Supposing I transfer that policeman is it going to solve the problem? So. we must put an end to this problem. ಇನ್ನು ಒಂದು ಮಾತು ಹೇಳುವುದಾದರೆ ಆ ಊರಿಗೆ ಪುಂಡುಗಂದಾಯ ಹಾಕಬೇಕಾಗುತ್ತದೆ so that people in that area may not involve in such kind of violence or disturbances. It appears to me that villages have become so factious and the poorer section of people are not in a position to live safely. ಆದ್ದರಿಂದ ಇದನ್ನು ನಾವು ಸ್ಟ್ರಾಂಗ್ ಆಗಿ ಹ್ಯಾಂಡಲ್ ಮಾಡಬೇಕೇ ಅಥವಾ ಸಬ್ ಇನ್‌ಸ್ಪೆಕ್ಟರ್‌ರವರಿಗೆ ಆಲ್ಲಿಂದ ತೆಗೆದುಹಾಕಬೇಕೆ ? ಇದರಲ್ಲಿ ನಾವು ಯಾವುದನ್ನು ಮಾಡಬೇಕು ?

ಶ್ರೀ ಪಂಪಾಪತಿ.—ಸ್ವಾಮಿ, ಈ ನಂಜುಂಡಪ್ಪ ಎನ್ನುವವರು ಸ್ವರ್ಣಸಿಂಗ್ ಕಾಂಗ್ರೆಸ್ಸಿನಲ್ಲಿದ್ದವರು. ಅವರು ಈಗ ಚುನಾವಣೆಯಲ್ಲಿ ಸೋತಿದ್ದರಿಂದ ಬೇಸರ ಪಟ್ಟುಕೊಂಡು ಈ ರೀತಿ ಮಾಡುತ್ತಿದ್ದಾನೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಪೋಲೀಸ್ ಅಧಿಕಾರಿಗಳು ಏನು ಮಾಡುತ್ತಾರೆಂದು ನಾನು ಹೇಳಿದ್ದೇನೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

Information to a Question about High Court service matters

SRI D. DEVARAJ URS.— Sir, I want to clarify one point regarding Sri C. M. Arumugham's question in respect of High Court Service matters. There is an Act passed by this House in respect of service matters. I have said, it has been sent to assent of the Governor. I wanted to correct my previous statement. The Bill which was passed by this House has not yet been sent to the assent of the Governor because of certain reasons which I do not like to disclose. But we will take steps to see that the Bills gets assent of the Governor. We have not sent it from the Secretariat. I do not like to disclose cretain matters connected with the discussion I have had with the Chief Justice. Therefore, it may take some time. This is the position.

MATTER UNDER RULE 312

(i) re: improving the services of the KSRTC Buses in Hubli Division.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).— ನಾನು ಹುಬ್ಬಳ್ಳಿ ಸಾರಿಗೆ ಸಂಸ್ಥೆಯ ಬಗ್ಗೆ ಒಂದು ವಿಷಯವನ್ನು ಎತ್ತುತ್ತಿದ್ದೇನೆ.

(ಮಾನ್ಯ ಪಾರ್ಲಿಮೆಂಟ್ರಿಯವರು ಸದನದಿಂದ ಹೊರಗೆ ಹೋಗಲಿನ್ನದು)

ಶ್ರೀ ಹೆಚ್ ಡಿ. ದೇವೇಗೌಡ — ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಹೊರ ಗಡೆ ಹೋಗುತ್ತಿರುವಂತಿದೆ. ಈಗ ನಾವು ನಿನ್ನೆ ನ ೆದಂಥ ವಿಷಯವನ್ನು ಪ್ರಸ್ತಾಪಿಸಬೇಕಾಗಿರುವುದರಿಂದ ಮುಖ್ಯಮಂತ್ರಿಯವರ ಹಾಜರಿ ಅತ್ಯಗತ್ಯವಾಗಿದೆ. ಅದ್ದರಿಂದ ಅವರು ಸದನದಲ್ಲೇ ಇರಬೇಕಾಗಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಆಗಲಿ ನಾನು ಇರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ — ಸ್ವಾಮಿ, ನಾನು ಆಗಲೆ ಹುಬ್ಬಳ್ಳಿ ಸಾರಿಗೆ ಸಂಸ್ಥೆಯ ಬಗ್ಗೆ ಮಾತನಾಡುತ್ತಿದ್ದೆ. ನಮ್ಮ ವಿಭಾಗ ಒಂದು ವರ್ಷಕ್ಕೆ ೪ ಲಕ್ಷ ರೂಗಳ ಉತ್ಪತ್ತಿಯನ್ನು ಸಾರಿಗೆ ಸಂಸ್ಥೆಗೆ ಕೊಡತಕ್ಕ ದೊಡ್ಡ ವಿಭಾಗ. ಅಲ್ಲಿರತಕ್ಕ ಬಸ್‌ಗಳ ಪೈಕಿ ೧೧೬ ಬಸ್‌ಗಳನ್ನು ತಕ್ಷಣ ಬದಲಾಯಿಸಬೇಕಾಗಿದೆ. ಈಗ ಕಳೆದ ಎರಡು ವರ್ಷಗಳಲ್ಲಿ ಅಲ್ಲಿಗೆ ೪೦ ಬಸ್‌ಗಳನ್ನು ಕೊಟ್ಟಿದೆ. ಹುಬ್ಬಳ್ಳಿ-ದಾರವಾಡಕ್ಕೆ ಸುಮಾರು ೫೦ ಬಸ್‌ಗಳ ಅವಶ್ಯಕತೆ ಇದೆ. ಹುಬ್ಬಳ್ಳಿಗೆ ಇನ್ನೂ ೧೫೦ ಬಸ್‌ಗಳನ್ನು ಹೆಚ್ಚಿದರೂ ಸಾಕಾಗುವುದಿಲ್ಲ. ಹಾಸನ ವಿಭಾಗಕ್ಕೆ ೧೩೭ ಹಾಗೂ ಕೋಲಾರ ವಿಭಾಗಕ್ಕೆ ೮೦ ಬಸ್‌ಗಳನ್ನು ಕೊಟ್ಟಿದ್ದೀರಿ. ಆದರೆ ಜನಸಂಖ್ಯೆ ಜಾಸ್ತಿ ಇರತಕ್ಕ ನಮ್ಮ ಹುಬ್ಬಳ್ಳಿ ವಿಭಾಗಕ್ಕೆ ಕನಿಷ್ಠ ೧೦೦ ಬಸ್‌ಗಳನ್ನಾದರೂ ಈಗ ಕೊಡದೇ ಹೋದರೆ ನಮ್ಮ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತದೆ:

ಒಂದು ತಿಂಗಳ ಹಿಂದೆ ಬಸ್ ನಿಲ್ದಾಣದಲ್ಲಿ ಒಂದು ದೊಡ್ಡ ಗಲಾಟೆ ನಡೆಯಿತು. ಗಲಾಟೆಯನ್ನು ಬಿಡಿಸಲು ಪೋಲೀಸಿನವರು ಬರತಕ್ಕಂಥ ಪರಿಸ್ಥಿತಿ ಉಂಟಾಯಿತು. ಅದ್ದರಿಂದ ಇದನ್ನು ಹೋಗಲಾಡಿಸಲು ಸರ್ಕಾರ ಕೂಡಲೇ ಏನು ಕ್ರಮ ತೆಗೆದು ಕೊಳ್ಳುತ್ತದೆ ಎಂದು ಕೇಳುತ್ತೇನೆ.

†ಶ್ರೀ ಎಂ.ಜಿ. ಜರತಾರ್‌ಗರ್.— (ಹುಬ್ಬಳ್ಳಿ) ಮಾನ್ಯ ಅಧ್ಯಕ್ಷರೆ ಮಾನ್ಯ ಬೊಮ್ಮಾಯಿಯವರು ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಸರಿಯಾದ ರೀತಿಯಲ್ಲಿ ಓಡಿಸಬೇಕು ಎನ್ನುವ ಬಗ್ಗೆ ಹೇಳಿದ್ದಾರೆ. ಹುಬ್ಬಳಿಯಲ್ಲಿ ಯೋಗ್ಯರೀತಿಯಲ್ಲಿ ಸಾಕಷ್ಟು ಬಸ್‌ನ ವ್ಯವಸ್ಥೆ ಸರಿಯಾಗಿಲ್ಲದ ಕಾರಣ ಅವಶ್ಯಕವಾದಷ್ಟು ಬಸ್‌ಗಳನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕಕ್ಕೆಂದರೆ ಹುಬ್ಬಳಿಯು ಕನಿಷ್ಟ ಮೂರು ಲಕ್ಷ ಜನಸಂಖ್ಯೆ ಉಳ್ಳದಾಗಿದ್ದು, ಅಲ್ಲಿ ದೊಡ್ಡ ದೊಡ್ಡ ಉದ್ಯಮಗಳು ಅಂದರೆ ರೈಲ್ವೆ ವರ್ಕ್‌ಷಾಪ್‌ನಲ್ಲಿ ಕೆಲಸಮಾಡತಕ್ಕಂಥ ಕಾರ್ಮಿಕರು, ಅಧಿಕಾರಿಗಳು ಬಹಳ ದೂರದಿಂದ ಬರತಕ್ಕಂಥವರು ಅವಶ್ಯಕವಾಗಿ ಸಿಟಿ ಬಸ್‌ಗಳನ್ನೇ ನಂಬಿಕೊಂಡಿರುತ್ತಾರೆ. ಇಲ್ಲಿಗೆ ಹೆಚ್ಚಿನ ಬಸ್‌ಗಳನ್ನು ಕೂಡದೇ ಇರುವುದರಿಂದ ಜನರು ಮನವಿಗಳನ್ನು ಸಲ್ಲಿಸಿದ್ದಾರೆ. ವರ್ಕ್‌ಷಾಪ್ ಜನರು ಇಂಡಸ್ಟ್ರಿಯಲ್ ಜನರು ಕೂಡ ಕೇಳಿಕೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳನ್ನು ಈ ಬಗ್ಗೆ ವಿಚಾರ ಮಾಡಿದಾಗ ಪ್ರತ್ಯಕ್ಷ ಬೇಟಿ ಕೊಟ್ಟಿರುತ್ತಾರೆ. ಅವರು ಆಶ್ವಾಸನೆಯಿಂನ್ನೂ ಸಹ ಕೊಟ್ಟಿರುತ್ತಾರೆ. ಅವರು ಕೊಟ್ಟಿರತಕ್ಕಂಥ ಶಾಸನೇ ಏನು ಇರುತ್ತದೆ ಅದು ಅಶ್ವಾಸನೆಯಾಗಿಯೇ ಉಳಿಯಬಾರದು. ಇದು ಒಂದುಮಹತ್ವದ ಸೇವೆ ಇರುತ್ತದೆ. ಶಾಲಾ ಮಕ್ಕಳು ವೇಳೆಗೆ ಸರಿಯಾಗಿ ಶಾಲೆಗೆ ಹೋಗಲು ಬಸ್‌ಗಳ ಅವಶ್ಯಕತೆ ಬಹಳಷ್ಟು ಇರುತ್ತದೆ. ಹುಬ್ಬಳ್ಳಿಯಲ್ಲಿ ೩-೪ ಕಡೆಬಸ್ ನಿಯಂತ್ರಣಗಳನ್ನು ಮಾಡದೆಹೋದರೆ ಸುಸೂತ್ರವಾಗಿ ಬಸ್‌ಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಹುಬ್ಬಳ್ಳಿಯಲ್ಲಿ ಬಂಕಾಪುರ ಚೌಕಿ ಇಂಡಸ್ಟ್ರಿಯಲ್ ಏರಿಯಾ, ಮತ್ತು ಹಾನಗಲ್ ಏರಿಯಾ ಈ ಮೂರು ಕಡೆಗಳಲ್ಲೂ ತಾವು ಹೆಚ್ಚಿನ ಬಸ್‌ಗಳ ಸಬ್ ಕಂಟ್ರೋಲ್ ಮಾಪತಂಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಎರಡು ಸಲಹೆಗಳನ್ನು ಮಾನ್ಯ ಸಾರಿಗೆಮಂತ್ರಿಗಳ ಮುಂದೆ ಇಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಂಪಾಪತಿ (ದಾವಣಗೆರೆ).— ದಾವಣಗೆರೆಯಲ್ಲೂ ಇದೇ ರೀತಿಯಾವ ತೊಂದರೆ ಇರುತ್ತದೆ. ದಾವಣಗೆರೆಯು ವಿಚಾರ ಹೇಳುವುದಕ್ಕೆ ಅವಕಾಶವನ್ನು ಕೊಡಬೇಕು. ದಾವಣಗೆರೆ ನಮ್ಮ ರಾಜ್ಯಕ್ಕೆ ಹೊರಗಡೆ ಇದಿಯೇ ಎಂದು ಕೇಳುತ್ತೇನೆ. ದಾವಣಗೆರೆಗೆ ಹೆಚ್ಚಿನ ಬಸ್ ಸೌಕರ್ಯವನ್ನು ಕೊಡಲು ಈಗ ಲಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು.— ಹುಬ್ಬಳ್ಳಿಯ ಬಗೆ ನೋಟೀಸ್ ಕಳುಹಿಸಿಕೊಟ್ಟಿರುತ್ತಾರೆ. ತಾವುಕೂಡ ಅದೇ ರೀತಿಯಲ್ಲಿ ನೋಟೀಸ್ ಕಳುಹಿಸಿಕೊಡಿ. ವಿಚಾರ ಮಾಡುವುದಿಲ್ಲವೆಂದು ಹೇಳುವುದಿಲ್ಲ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ಗುಂಡೂರಾವ್. — (ಸಾರಿಗೆ ಮತ್ತು ಪ್ರವಾಸೋದ್ಯಮ ಶಾಖೆಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ ಮಾನ್ಯ ಬೊಮ್ಮಾಯಿಯವರು ರೂಲ್ ನಂ. ೫೦೨ರ ಪ್ರಕಾರ ಹುಬ್ಬಳ್ಳಿ ಸಿಟಿ ಬಗ್ಗೆ ಮಾತ್ರ ಕೇಳಿರುತ್ತಾರೆ. ಡಿವಿಷನ್ ಬಗ್ಗೆ ಕೇಳಿರುವುದಿಲ್ಲ. ಅದಷ್ಟಕ್ಕೆ ಮಾತ್ರ ಹೇಳುತ್ತೇನೆ.

The Hubli Division of Karnataka State Road Trans-port Corporation is operating city and subbun services for catering to the traffic needs in he twin City of Hubli-Dharwar, coming under one Municipal Corporation.

At present, for operating 105 schedules in the said Ci y, 114 buses have been provided, which includes three Road Trains.

Considering the growth in traffic, 90 schedules, performing 819 trips daily were operated during 1976-77, 103 schedules performing 877 trips daily during 1977-78 and 105 schedules were operated performing 928 trips daily during 1978-79. Thus it may been that 58 additional trips have been added during the year 1977-78 and 51 additional trips have been added during the year 1978-79. From the above, it may be seen that addi ional trips have been provided to the extent possible year after year, but I concede that some more vehicles and trips are necessary to meet the growing needs of traffic of Hubli-Dharwar City.

Coming to the age of fleet, out of the 114 buses held, 72 buses have covered nearly 5.00 lakh kilometres and the remaning 42 buses are within the range of less than 5).000 kilometres to 4-50 lakh kilometres This is not a peculiar feature to Hubli-Dharwar city alone.

Out of these 114 buses, eleven buses are due for first reconditioning, 19 buses are due for second reconditioning and eleven buses are due for scrapping. Since there was difficultiy in getting the required number of new buses for the entire Corporation for operating both city and mofussil services due to paucity of funds, action was taken to recondition and convert 29 mofussil type buses into city type buses and these were alloted for operation in the city during the year 1978-79, Further, eleven city type vehicles and three road trains were reconditioned and allotted.

In this connection, I am to add that during 1977-78, we were able to get only 205 new buses and during 1978-79 370 new buses for the entaire Corporation, which is operating nearly 3450 schedules. Thus for want of sufficient new vehicles, whether it be for city or mofussil areas, augumentation of services and replacement of vehicles could not be ensured. However, taking into account the requirement of Hubli Division, 30 new vehicles were added during 1977-78 and 37 new vehicles during 1978-79, apart from providing reconditioned vehicles. Taking into account the new vehicles available during the last two

years, it may be seen that Hubli Division has been given a slightly better deal, compared to other Divisions.

This paucity of new vehicles both for augmentation and replacement, is not a phenomenon peculiar to Hubli-Dharwar City alone and in fact the same situation prevails in other cities also, including Bangalore. It is in this back-ground that I met and discussed with the Legislators and Members of Parliament of Karnataka the problems of the bus transport all over the State. After hearing them and assessing the requirements keeping in view the avoilablity of finances, a programme has been drawn for the purchase of about 1,000 chasiss, so that the dislocation and inconvenience to the travelling public could be reduced considerably.

In the circumstances stated it may be seen that additional schedules and trips have been provided to the extent possible to alleviate the difficulties of the commuting public of Hubli-Dharwar City, In this connection, if can be stated that the hunger strike offered by one of the office bearers of the K. S. R. T. 'Employee's Union, Hubli, pertains to about twenty issues and one of which was requirment of additional vehicles and that too for Hubli Division as a whole and not just for the Hubli-Dharwar City, In fact the Coropn. has already opened a Traffic Depot. at Dharwar and it is proposed to convert this into a regular Depot. providing facilities for maintenance and repairs of vehicles with a view to relieving the congestion in Hubli City Depot. as and when new buses are received after body building, action would be taken to replace the aged vehicles and also to augment services to a reasonable extent, simultan-ously keeping in view the need for similar action in other parts of the State.

ನಮ್ಮ ಮಾನ್ಯ ವಿರೋದ ಪಕ್ಷದ ನಾಯಕರು ಏನು ಹೇಳಿದ್ದಾರೆ ಅದನ್ನು ನಾನು ಪೂರ್ಣವಾಗಿ ಅಲ್ಲಗಳೆಯುವುದಿಲ್ಲ, ಬಹು ಬಾಗದಲ್ಲಿ ಈ ಸ್ಥಿತಿ ಇರುತ್ತದೆ. ಹುಬ್ಬಳ್ಳಿ ಸಿಟಿ ಅಷ್ಟು ಮಾತ್ರವೇ ಅಲ್ಲ ಎಲ್ಲ ಕಡೆಗೂ ಈ ಸಮಸ್ಯೆ ಬಂದಿರುತ್ತದೆ. ಇದಕ್ಕೆ ಕಾರಣವೇನೆಂದರೆ ಬಸ್‌ನ ಚಾಸಿ ಸಿಗದೆ ಇರತಕ್ಕಂಥಾದ್ದಾಗಿರುತ್ತದೆ ಜನಸಂಖ್ಯೆ ಯಾವರೀತಿಯಲ್ಲಿ ರಾಜ್ಯದಲ್ಲಿ ಮತ್ತು ನಗರದಲ್ಲಿ ಹೆಚ್ಚುತ್ತಾ ಇದೆ ಅದಕ್ಕೆ ತಕ್ಕಂಥೆ ಬಸ್‌ಗಳನ್ನು ತರಿಸಿಕೊಳ್ಳುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ. ಈ ಸಮಸ್ಯೆಯನ್ನು ಎದುರಿಸಲು ನಾವು ತಿಳಿದುಕೊಂಡಿರುವಷ್ಟು ಸುಲಭವಾಗಿಲ್ಲ. ಆದರಲ್ಲೂ ಬೆಂಗಳೂರು ನಗರದಲ್ಲಿ, ಹುಬ್ಬಳ್ಳಿ ನಗರದಲ್ಲಿ ಸ್ಲಮ್ಸ್ ಬೆಳೆಯುತ್ತಿರುವುದಕ್ಕೆ ವಿಶೇಷವಾಗಿ ಹಳ್ಳಿಗಳಿಂದ ಬೇರೆ ಬೇರೆ ಕಡೆಗಳಿಂದ ವಲಸೆ ಬರತಕ್ಕಂಥ ಜನರೆ ಕಾರಣವಾಗಿರುತ್ತದೆ. ಇವರೆಲ್ಲರೂ ಬಸ್‌ಗಳಲ್ಲಿ ಓಡಾಡತಕ್ಕಂಥ ಜನರಾಗಿರುತ್ತಾರೆ. ರಾಜ್ಯದ ಮತ್ತು ನಗರಗಳ ಜನರಿಗೆ ಸಾರಿಗೆ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಬೇಕಾಗುವಷ್ಟುಸಂಖ್ಯೆಯಲ್ಲಿ ಬಸ್‌ಗಳು ನಮಲ್ಲಿಲ್ಲ. ಇದನ್ನು ಸುಧಾರಿಸಬೇಕಾದರೆ ಅನೇಕ ವರ್ಷಗಳು ಬೇಕಾಗುತ್ತವೆ ಬೆಂಗಳೂರು ನಗರಕ್ಕೇ ಸುಮಾರು ೬೦೦-೮೦೦ ಹೆಚ್ಚು ಬಸ್‌ಗಳು ಬೇಕು. ಹುಬ್ಬಳ್ಳಿಗೆ ಸುಮಾರು ೧೦೦-೨೦೦ ಹೆಚ್ಚು ಬಸ್‌ಗಳು ಬೇಕು ಆದರೆ ಬಸ್‌ಗಳು ಸಿಗುತ್ತಿಲ್ಲ. ಹಿಂದಿನಿಂದ ಬಸ್‌ಗಳ ಸಂಖ್ಯೆಯನ್ನು ಏರಿಸಿಕೊಂಡು ಬಂದಿದ್ದರೆ ಈ ಸಮಸ್ಯೆ ಈಗ ಉದ್ಭವವಾಗುತ್ತಿರಲ್ಲಿಲ್ಲ. ನಾನಾ ಕಾರಣಗಳಿಂದ ಬಸ್‌ಗಳ ಸಂಖ್ಯೆಯನು ಹೆಚ್ಚಿಸಲಿಲ್ಲ. ಆದರೆ ಈಗ ಜನಸಂಖ್ಯೆಏರಿದೆ. ಜೊತೆಗೆ ಹೆಚ್ಚು ಜನರು ಪ್ರಯಾಣ ಅಧಿರುಚಿಯನ್ನು ಬೆಳೆಸಿಕೊಂಡಿದ್ದಾರೆ. ಎಲ್ಲರೂ ಸಂಚಾರ ಮಾಡಬೇಕೆಂದು ಬಯಸುತ್ತಾರೆ. ಹೀಗಿರುವುದರಿಂದ

ಸಾರಿಗೆ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಬಾರಿ ಸಮಸ್ಯೆ ಸರ್ಕಾರದ ಮುಂದಿದೆ. ನಗರದ ಮತ್ತು ರಾಜ್ಯದ ಸಾರಿಗೆ ಸಮಸ್ಯೆಗಳ ಬಗ್ಗೆ ಧೀರ್ಘವಾಗಿ ವಿಚಾರ ಮಾಡಿ, ಚರ್ಚೆಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಂದು ತೀರ್ಮಾನಕ್ಕೆ ಬಂದು ಜನರ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಸರ್ಕಾರ ಈ ವರ್ಷ ಒಂದು ಸಾವಿರ ಬಸ್‌ಗಳನ್ನು ತೆಗೆದುಕೊಂಡು ಬೇರೆ ಬೇರೆ ವಿಭಾಗಗಳಿಗೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ. ಹಣಕಾಸಿನ ಪರಿಸ್ಥಿತಿ ಉತ್ತಮಗೊಂಡಹಾಗೆ ಇನ್ನು ಹೆಚ್ಚು ಬಸ್‌ಗಳನ್ನು ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ರಸ್ತೆ ಸಾರಿಗೆ ಕಾರ್ಪೊರೇಷನ್ ಮತ್ತು ಸರ್ಕಾರ ತೀವ್ರ ಪ್ರಯತ್ನಪಡುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

೧೧-೩೦ ಎ.ಎಂ.

ಶ್ರೀ ಎಸ್. ಆರ್. ಬೊವಕ್ಕಿಯವರು. — ಯಾವ ವಿಭಾಗದಲ್ಲಿ ಎಂಥ ಲಕ್ಷ ರೂಪಾಯಿ ಲಾಭ ಬರುತ್ತದೋ ಅಂಥ ಕಡೆಗಳಿಗೆ ಕಡಿಮೆ ಬಸ್‌ಗಳನ್ನು ಕೊಟ್ಟು ಹೆಚ್ಚು ನಷ್ಟವಾಗಿರತಕ್ಕ ವಿಭಾಗಗಳಿಗೆ ಹೆಚ್ಚು ಬಸ್‌ಗಳನ್ನು ಕೊಡುವುದು ಸರ್ಕಾರದ ನೀತಿಯೇ? ಅವಶ್ಯಕತೆ ಇರುವ ಗಡೆ ಕೊಡಿ, ಆದರೆ ಬೇರೆ ಕಡೆಗೂ ಅವಶ್ಯಕತೆ ನೋಡಿಕೊಂಡು ಕೊಡಬೇಕು.

ಶ್ರೀ ಆರ್. ಗುಂಡುರಾವ್. — ಲಾಭ ಹೆಚ್ಚು ಬಂದಕಡೆಗೆ ಕಡಿಮೆಕೊಟ್ಟು, ಲಾಭ ಬರದೇ ಇರುವ ಕಡೆಗೆ ಹೆಚ್ಚು ಬಸ್‌ಗಳನ್ನು ನೀಡಬೇಕು ಎಂಬುದು ನಮ್ಮ ಉದ್ದೇಶವೇನು ಅಲ್ಲ. ಸಾರಿಗೆ ಕಾರ್ಪೊರೇಷನ್ ಸ್ಥಾಪನೆಯಾಗಿರುವುದು ಲಾಭ ಸಂಪಾದನೆ ಮಾಡುವುದಕ್ಕಲ್ಲ. ಜನರಿಗೆ ಸೌಕರ್ಯವನ್ನು ಒದಗಿಸಿ ಕೊಡಬೇಕು ಎಂಬ ಉದ್ದೇಶದಿಂದ ಅದನ್ನು ಇಂದಿನ ಕಾಲದಲ್ಲಿ ಸ್ಥಾಪನೆ ಮಾಡಿದ್ದಾರೆ. ಅದರ ಪ್ರಯೋಜನ ಎಷ್ಟರಮಟ್ಟಿಗೆ ಆಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಯಾವ ಯಾವ ಭಾಗದಲ್ಲಿ ಪ್ರಯಾಣಿಕರು ಹೆಚ್ಚಾಗಿದ್ದಾರೋ ಅಥ ಕಡಗಳಿಗೆ ಹೆಚ್ಚು ಬಸ್‌ಗಳನು ಕೊಡಬೇಕಾಗುತ್ತದೆ. ಈಗಾಗಲೇ ಬಜೆಟ್ ಭಾಷಣದಲ್ಲಿ ಹೇಳಿದ್ದೇವೆ, ಬೇರೆ ಬೇರೆ ಡಿವಿಷನ್‌ಗಳಿಗೆ ಬೇರೆ ಬೇರೆ ಕಾರ್ಪೊರೇಷನ್ ಸ್ಥಾಪನೆ ಮಾಡಿದರೆ ಇಂಥ ಸಮಸ್ಯೆ ಉದ್ಭವವಾಗುವುದಿಲ್ಲ. ಆದೇರೀತಿ ಹುಬ್ಬಳ್ಳಿ ಡಿವಿಷನ್ನಿಗೂ ಒಂದು ಕಾರ್ಪೊರೇಷನ್ ಆದರೆ ಈ ಸಮಸ್ಯೆಗಳು ಬಗೆಹರಿದು ಹೆಚ್ಚು ಅನುಕೂಲವಾಗಬಹುದು. ಈ ದೃಷ್ಟಿಯಿಂದ ಬೇರೆ ಬೇರೆ ಕಾರ್ಪೊರೇಷನ್‌ಗಳನ್ನು ಮಾಡಬೇಕೆಂದಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ನಾನು ಒಪ್ಪುತ್ತೇನೆ. ಮುಂಬಯಿ ಕರ್ನಾಟಕದ ಭಾಗದಲ್ಲಿ ಸಾರಿಗೆ ಸಂಸ್ಥೆ ಲಾಭದಾಕವಾಗಿ ಕೆಲಸ ಮಾಡುತ್ತಿದೆ.

(ii) re : Allotment of medical seats at region-wise basis

†SRI PRABHAKAR THELKAR (Chitapur).—I want to raise a matter under rule 312 regarding the allotment of medical seats region wise as it has been done in Maharastra State so as to prevent denial of the seats to the students comming from rural and mofussil areas in the State. It has seen that while selecting candidates for medical college students are selected on merit basis. What we see is that the students from cities like Mangalore, Bangalore or Dharwar where teaching fasilities are very good, the environment for the students are good, coaching is also good they only get seats in the medical colleges. Students coming from rural and mofussil areas where these facilities are not so good are not able to get admission. Thus, at the time of selection of the candidates for these medical colleges we see that about 60 to 70% of the students who are in cities right from the beginning they only get admission because they get good percentage of marks. One more thing I want to stress is that such of the students who get admission they come out from the colleges as doctors and if these students or doctors appointed or posted to the rural areas they